# ಸಾವಯವ ಕೃಷಿ ಪದ್ಧತಿಯಲ್ಲಿ ಸಾಧನೆ ಶ್ರೀ ಪಾಂಡು ರಾವಜಿ ಪಾಟೀಲ

ಬೆಳಗಾವಿ ಜಿಲ್ಲೆಯ ಮುಕಾಂ ಗ್ರಾಮದ ಪ್ರಗತಿಪರ ರೈತ ಶ್ರೀ ಪಾಂಡು ರಾವಜಿ ಪಾಟೀಲರದು ಮೂರು ಎಕರೆ ಕಪ್ಪು ಎರೆ ಖುಷ್ಕಿ ಭೂಮಿ. ಕೊಳವೆ ಬಾವಿಯನ್ನು ಹೊಂದಿರುವುದರಿಂದ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಂಡಿರುವ ಶ್ರೀಯುತರು, ತೋಟಗಾರಿಕೆ ಇಲಾಖಾ ಯೋಜನೆಯಡಿ 2009–10ನೇ ಸಾಲಿನಲ್ಲಿ "ಬಾಳೆ" ಬೆಳೆ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಎರಡು ಎಕರೆ ಪ್ರದೇಶ ಬಾಳೆ ಬೆಳೆಗೆ ಮತ್ತು ಜೈವಿಕ ಗೊಬ್ಬರಕ್ಕೆ ಸಹಾಯಧನ ಪಡೆದು ಉತ್ತಮ ಬೆಳೆ ಪಡೆದಿರುತ್ತಾರೆ.

ತೋಟಗಾರಿಕೆ ಇಲಾಖೆಯಿಂದ ಈ ಸಹಾಯಧನ ಪಡೆಯುವುದಕ್ಕೆ ಮುನ್ನ ಸದರಿ ಜಮೀನಿನಲ್ಲಿ ಕೃಷಿ ಬೆಳೆಗಳಾದ ಬತ್ತ, ನೆಲಗಡಲೆ ಮುಂತಾದವನ್ನು ಬೆಳೆಯುತ್ತಿದ್ದು, ಆರ್ಥಿಕ ಸ್ಥಿರತೆಯನ್ನು ಕಂಡುಕೊಳ್ಳುವಲ್ಲಿ ವಿಫಲರಾಗಿದ್ದರು.

ನೀರಾವರಿ ಸೌಲಭ್ಯವಿದ್ದು, ಶೀಘ್ರ ಫಲ ನೀಡುವ ಬಾಳೆ, ಪಪ್ಪಾಯಿ ಮುಂತಾದ ಬೆಳೆಗಳನ್ನು ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುವುದರಿಂದ ಭೂಮಿಯಲ್ಲಿ ಫಲವತ್ತತೆಯನ್ನು ಕಾಯ್ದುಕೊಂಡು ಉತ್ತಮ ಇಳುವರಿಯುನ್ನು ಸಹ ಪಡೆಯುವಲ್ಲಿ ಶ್ರೀ ರಾವಜಿ ಪಾಟೀಲರು ಯಶಸ್ವಿಯಾಗಿದ್ದಾರೆ.

ಅಲ್ಪ ಸಮಯದಲ್ಲಿ ಶೀಘ್ರ ಇಳುವರಿ ಕೊಡುವ ಬಾಳೆ, ಪಪ್ಪಾಯಿ ಬೆಳೆಗಳ ಬಗ್ಗೆ ಅರಿವು ಮೂಡಿಸಿದ ತೋಟಗಾರಿಕೆ ಇಲಾಖೆಯನ್ನು ಇವರು ಸ್ಮರಿಸುತ್ತಾರೆ.



